LEGISLATIVE ASSEMBLY.

NINTH DAY

Monday, 27th March 1950.

The Assembly met in the Assembly Hall, Old Public Offices, Bangalore, at Thirty Minutes past Eight of the Clock.

Mr. Speaker (Sri V. Venkatappa) in the Chair.

STARRED QUESTIONS

(to which oral answers were given).

Mr. SPEAKER (Sri. V. Venkatappa).—Question No. 162.

Issue of permits for the transport of food-grains from one place to another.

Q.*—162. **Sri B. N. BORANNA GOWDA (Hassan District—General).—

Will the Government be pleased to state:—

(*a*) the authorities empowered to issue permits for the transport of food-grains from one place to another;

(*b*) the circumstances under which such transports are permitted;

(*c*) whether Food Sheristedars are empowered to issue permits;

(*d*) the action that will be taken against the authorities who have issued permits with a *view* to helping the black-marketeers who have no lands in the taluks?

A.—**Sri T. MARIAPPA** (Home Minister).—

(*a*) Director of Food Supplies, Deputy Commissioners, Sub-Division Officers, Amildars, Revenue Inspectors, Shanbhogs and Assistant Directors of Agriculture.

(*b*) (1) Transport outside the State for *bona fide* use of travellers on pilgrimage, etc.

(2) For domestic consumption of—

(i) Landholders living outside the District;

(ii) Outside the Taluk but within the same District;

(iii) Within the Taluk but in a village different from where the food-grains are grown;

(iv) Movement of food-grains from village site to the residence where the latter is situated in another village but within the same Revenue Circle; and

(v) Transport of seed grains.

(*c*) No.

(*d*) They will be treated as abettors of the offence of black-marketing and prosecuted along with the offenders.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಶ್ಯಾನು ಭೋಗರು ಮತ್ತು ರೆವೆನ್ಯೂ ಇನ್ಸ್‌ಪೆಕ್ಟರುಗಳು ಯಾವ್ಯಾವುದಕ್ಕೆ ಪರ್ಮಿಟ್‌ಕೊಡುತ್ತಾರೆ?

*ಶ್ರೀ ಟಿ. ಮರಿಯಪ್ಪನವರು.—ಒಂದೂರಿನಿಂದ ಪಕ್ಕದ ಊರಿಗೆ ಹೋಗಬೇಕಾದರೆ ಅವರುಗಳು ಪರ್ಮಿಟ್ ಕೊಡುತ್ತಾರೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಬಾಕಿ ಕಡೆಗೆ ಹೋಗಬೇಕಾದರೆ ಪರ್ಮಿಟ್ ಕೊಡುವವರು ಯಾರು?

ಶ್ರೀ ಟಿ. ಮರಿಯಪ್ಪನವರು.—ಆ ತಪಶೀಲುಗಳೆಲ್ಲಾ ನುಗ್ಗಿಯ ಆಜ್ಞೆಯಲ್ಲಿ ನಮೂದಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಶ್ಯಾನು ಭೋಗರು ಮತ್ತು ರೆವೆನ್ಯೂ ಇನ್ಸ್‌ಪೆಕ್ಟರುಗಳಿಗೆ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಪರ್ಮಿಟ್ ಕೊಡುವುದಕ್ಕೆ ಅಧಿಕಾರವಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಹಾಗಾದರೆ ಫುಡ್ ಶಿರಸ್ತೇದಾರರು ಕೊಡುತ್ತಾರೆಯೇ?

ಶ್ರೀ ಟಿ. ಮರಿಯಪ್ಪನವರು.—ಫುಡ್ ಶಿರಸ್ತೇದಾರರು ಕೊಡಲೇ ಕೂಡದೆಂದು ಹೇಳಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಹಾಗೆ ಕೊಟ್ಟಿದ್ದರ ಏನು ಮಾಡುತ್ತೀರಿ?

ಶ್ರೀ ಟಿ. ಮರಿಯಪ್ಪನವರು.—ಅದು ಊಹಾ ಪ್ರಶ್ನೆ.

ಶ್ರೀ ಬಿ. ಎಚ್. ಬೋರಣ್ಣಗೌಡರು.—ತಾಲ್ಲೂಕಿನಿಂದ ತಾಲ್ಲೂಕಿಗಾಗಲೀ, ಡಿಸ್ಟ್ರಿಕ್ಟ್‌ನಿಂದ ಡಿಸ್ಟ್ರಿಕ್ಟ್‌ಗಾಗಲು ಪರ್ಮಿಟ್ ಕೊಡತಕ್ಕ ಸನ್ನಿವೇಶದಲ್ಲಿ ಅದನ್ನು ಅಧಿಕಾರಿಗಳು ಅವರ ಆಫೀಸಿನಲ್ಲಿ ಕೊಡುತ್ತಾರೆಯೇ ಅಥವಾ ಅವರ ಮನೆಯಲ್ಲಿ ಕೊಡುತ್ತಾರೆಯೇ?

ಶ್ರೀ ಟಿ. ಮರಿಯಪ್ಪನವರು.—ಆಫೀಸಿನಲ್ಲೇ ಕೊಡಬೇಕು.

ಶ್ರೀ ಬಿ. ಎಚ್. ಬೋರಣ್ಣಗೌಡರು.—ಯಾವ ಸಂದರ್ಭದಲ್ಲೂ ಫುಡ್ ಶಿರಸ್ತೇದಾರರು ಕೊಡಕೂಡದೇ?

ಶ್ರೀ ಟಿ. ಮರಿಯಪ್ಪನವರು.—ಹೌದು; ಕಾನೂನಿನ ಪ್ರಕಾರ ಅವರಿಗೆ ಅಧಿಕಾರವಿಲ್ಲ.

ಶ್ರೀ ಬಿ. ಎಚ್. ಬೋರಣ್ಣಗೌಡರು.—" for .....

ಎಂದೇನಾದರೂ ರಜ ಮಾಡಿಕೊಡಬಹುದೇ!

ಶ್ರೀ ಟಿ. ಮರಿಯಪ್ಪನವರು.—ಅದು ಆಯಾ ಸನ್ನಿವೇಶದ ಮೇಲೆ ಹೋಗುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ರೆವೆನ್ಯೂ ಇನ್ಸ್‌ಪೆಕ್ಟರು ಆಫೀಸಿನಲ್ಲಿಯೇ ಪರ್ಮಿಟ್ ಕೊಡಬೇಕೆಂದು ಹೇಳಿದಿರಿ. ರೆವೆನ್ಯೂ ಇನ್ಸ್‌ಪೆಕ್ಟರಿಗೆ ಬೇರೆ ಆಫೀಸ್ ಇರುತ್ತದೆಯೇ!

ಶ್ರೀ ಟಿ. ಮರಿಯಪ್ಪನವರು.—ಮನೆಯೊಳಗೇ ಒಂದು ರೂಮನ್ನು ಆಫೀಸಾಗಿ ಮಾಡಿಕೊಂಡಿರುತ್ತಾರೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಇಲ್ಲಿ ಕೊಟ್ಟಿರುವ ದರಲ್ಲಿ ಶ್ಯಾನುಭೋಗರಾದ ಮೇಲೆ ಅಸಿಸ್ಟೆಂಟ್ ಅಗ್ರಿಕಲ್ಚರಲ್ ಡೈರೆಕ್ಟರವರನ್ನು ತೋರಿಸಿದ್ದೀರಿ ಇದೇನು ಅವರು ಶ್ಯಾನುಭೋಗರಿಗಿಂತ ಕಡಿಮೆ ಅಂತಲೇ!

ಶ್ರೀ ಟಿ. ಮರಿಯಪ್ಪನವರು.—ಅದೇನೂ ಇಲ್ಲ. ಬೀಜದ ಬತ್ತಕ್ಕೆ ಅಸಿಸ್ಟೆಂಟ್ ಅಗ್ರಿಕಲ್ಚರಲ್ ಡೈರೆಕ್ಟರವರು ಪರ್ಮಿಟ್ ಕೊಡುತ್ತಾರೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಹಳ್ಳಿಗಳಿಂದ ರೇಷನ್‌ದವಸವನ್ನು ತರಿಸಿಕೊಂಡಿದ್ದರೂ ಅವರಗಳು ಯಥ ಪ್ರಕಾರ ತಮ್ಮ ರೇಷನ್ನನ್ನು ಡಿಪೋಗಳಲ್ಲಿ ತೆಗೆದುಕೊಳ್ಳುತ್ತಲೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ!

ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಹಾಗೆ ದವಸ ತರಿಸಿಕೊಳ್ಳುವವರು ತಮ್ಮ ರೇಷನ್ ಕಾರ್ಡುಗಳನ್ನು ತೆಗೆದುಕೊಂಡು ಹೋಗಿ, ಡೆಪ್ಯುಟಿ ಕಮೀಷನರವರಿಗೆ ತೋರಿಸಿ ಅವರಿಂದ ಗುರುತು ಮಾಡಿಸಿಕೊಂಡು ಬಂದರೇನೇ ಆ ದವಸ ಅವರಿಗೆ ಕೊಡುವುದು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಅನೇಕ ಹಳ್ಳಿಗಳಲ್ಲಿ ರೈತರು ಒಂದು ಊರಿನಲ್ಲಿ ವಾಸಮಾಡಿಕೊಂಡಿದ್ದು ಪಕ್ಕದ ಊರಿನಿಂದ ತಮ್ಮ ಜಮೀನಿನ ಬೆಳೆಯನ್ನು ಸಾಗಿಸಿಕೊಂಡು ಬರುವುದಕ್ಕೆ ಬಹಳ ಮುಟ್ಟಿಗೆ ಕಷ್ಟವಾಗುವುದು ತಮ್ಮಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಅಷ್ಟು ತೊಂದರೆಯಿದೆಯೆಂದು ಹೇಳಲಾರೆ. ಏಕೆಂದರೆ ಇಂಥ ಸಂದರ್ಭಗಳಲ್ಲಿ, ನಿಬಂಧನೆಗಳನ್ನು ಸಾಧ್ಯವಾದಷ್ಟು ಸಡಿಲಪಡಿಸಿದ್ದೇವೆ. ರೈತರಿಗೆ ಒಂದೂರಿನಿಂದ ಇನ್ನೊಂದೂರಿಗೆ ತಮ್ಮ ದವಸಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಅದಷ್ಟು ಮುಟ್ಟಿಗೆ ತೊಂದರೆಯಿರಕೂಡದೆಂಬುದೇ ನಮ್ಮ ಆಸೆ. ಆದರೆ ಬ್ಲಾಕ್ ಮಾರ್ಕೆಟ್ಟಿಗೆ ದವಸ ಹೋಗದಂತೆ ನೋಡಿಕೊಳ್ಳುವುದಕ್ಕೆ ಅವಕಾಶವಾಗಲೆಂದು ಈ ರೀತಿ ಪರ್ಮಿಟ್ ತೆಗೆದು ಕೊಳ್ಳಬೇಕೆಂದು ಹೇಳಿದ್ದೇವೆ.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಪ್ರಯಾಣೀಕರು ರೇಷನ್ ಪ್ರದೇಶಕ್ಕೆ ಹೋಗುವಾಗ ಹೊರಗಿನಿಂದ ಹತ್ತು ಸೇರುಗಳಷ್ಟು ದವಸವನ್ನು ತರಬಹುದೆಂದು ಹಿಂದೆ ಅವಕಾಶವಿರಲಿಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ಹಿಂದೆಯೂ ಇರಲಿಲ್ಲ; ಈಗಲೂ ಇಲ್ಲ. Statutory ration ಪ್ರದೇಶಕ್ಕೆ ಹಾಗೆ ತರುವುದಕ್ಕೆ ಅವಕಾಶವಿಲ್ಲ.

ಶ್ರೀ ಜಿ. ನಾರಾಯಣಗೌಡರು.—Statutory ration ಪ್ರದೇಶಕ್ಕೂ ಹಿಂದೆ ತರಬಹುದೆಂದಿತ್ತಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಯಾವಾಗಲೂ ಇಲ್ಲ. ಪರ್ಮಿಟ್ ಮೂಲಕ ತರಬಹುದಾಗಿತ್ತು, ಅಷ್ಟೆ.

ಶ್ರೀ ಜಿ. ನಾರಾಯಣಗೌಡರು.—ಪ್ರಯಾಣಿಕರು ಸಾಮಾನ್ಯವಾಗಿ ಇಂಥಾ Statutory ration ಪ್ರದೇಶಕ್ಕೆ ಹೋಗುವಾಗ ತಮ್ಮ ಊಟ ಉಪಚಾರಗಳಿಗಾಗಿ ತಮ್ಮ ರೇಷನ್ ತೆಗೆದುಕೊಂಡು ಹೋಗುವುದಕ್ಕೆ ಅವಕಾಶ ಕೊಡುವುದು ಒಳ್ಳೆಯದಲ್ಲವೆ?

ಶ್ರೀ ಟಿ. ಮರಿಯಪ್ಪನವರು.—ಪ್ರಯಾಣೀಕರು ಹೊರ ನಿಂದ ಬಂದ ತಕ್ಷಣ ಅವರಿಗೆ ಹಂಗಾಮಿ ರೇಷನ್ ಕಾರ್ಡುಗಳನ್ನು ಕೊಡುತ್ತೇವೆ.

ಶ್ರೀ ಜಿ. ನಾರಾಯಣಗೌಡರು.—ಹಾಗೆ ಕಾರ್ಡು ತೆಗೆದುಕೊಳ್ಳುವುದಕ್ಕೆ ತೊಂದರೆಯಾಗುವುದಿಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ತೊಂದರೆಯಾಗಕೂಡದೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿದ್ದೇವೆ.

ಶ್ರೀ ಜಿ. ನಾರಾಯಣಗೌಡರು.—ಒಕಸ್ಮಾತ್ತಾಗಿ 5-6 ಜನಗಳು ಹೀಗೆ ಹೊರಗಿನಿಂದ ಈ ಊರಿಗೆ ಬರಬೇಕೆಂದರೆ, ಅವರು ತಮ್ಮ ಜೊತೆಯಲ್ಲೇ ರೇಷನ್ ತರುವುದು ಕಷ್ಟವಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ಹಾಗೆ ಬೇಕಾದರೆ, ಪರ್ಮಿಟ್ ಪಡೆದು ಅವರು ತೆಗೆದುಕೊಂಡು ಹೋಗಬಹುದು.

Sri M. GOVINDA REDDY (Chitaldrug District—General).—May I know if persons who own land in Mysore, but who reside outside, are permitted to transport food-grains, for their own consumption?

Sri T. MARIAPPA.—The question is not very clear. Does the Hon'ble Member mean transporting of food-grains to Madras or Bombay?

Sri M. GOVINDA REDDY.—I mean Madras.

Sri T. MARIAPPA.—There is reciprocity between Madras and Mysore. Madras permits food-grains to be brought into Mysore and from here also we permit food-grains to be taken out to Madras for their consumption.

Sri M. GOVINDA REDDY.—Has it come to the notice of the Hon'ble Food Minister that permits have been refused in such cases when applied for?

Sri T. MARIAPPA.—Such instances have not come to my notice so far. I will take up the matter if they are brought to my notice.

Position of Food Production in the State at the end of February 1950.

*Q.—190. **Janab SYED ABDUR RAHMAN** (Chikmagalur *cum* Shimoga—Muslim).—

Will the Government be pleased to state:—

(*a*) the position of food production in the State at the end of February 1950 in respect of—

(i) stocks available;